‘ರುಕ್ಕು, ಹಣ ಯಾಕೆ ಬೇಕೆಂದು ಕಾರಣ ಕೇಳಲಿಲ್ಲ ನೀನು!... ಇಷ್ಟು ವರ್ಷ ಕಳೆದರೂ ನನ್ನ ಮೇಲಿನ ಕೋಪವಿನ್ನೂ ತಗ್ಗಿಲ್ಲವೇ? ಮಾತನಾಡಲೇಬಾರದು ಎಂದು ನಿರ್ಧರಿಸಿದಂತಿದೆ ನೀನು! ಸ್ವಾಭಿಮಾನ ಅಂತ ಕೈಕಟ್ಟಿ ಕೂರುವ ಸಮಯವಿದಲ್ಲ ಅಂತ ನೀನು ಕಂಡೊಡನೆಯೇ ಹಣ ಕೇಳಿಬಿಟ್ಟೆ, ಕ್ಷಮಿಸು’ ಎಂದಳು ಪೂರ್ಣಿಮಾ.

ಮಾಡಲು ಕೆಲಸವಿಲ್ಲದೆ ಸತ್ಯಾಗ್ರಹ, ಕಾನೂನು, ಸಮಾಜ ಅಂತ ಓಡಾಡುವ ಕಾರ್ತಿಕನೆಂಬ ಕಮಂಗಿಯೊಂದಿಗೆ ಅಕ್ರಮಸಂಬಂಧ ಬೆಳೆಸಿದ ಮೇಲೆ ಕಂಡವರೆದುರು ಕೈ ಚೆಲ್ಲದೆ ಇನ್ನೇನು ಮಾಡಿಯಾಳು ಎಂದು ಮೌನವಾಗಿಯೇ ಅವಳನ್ನು ಹಳಿಯುತ್ತಾ ಮಾತಿಗೆ ಶಬ್ದ ಹುಡುಕುತ್ತಿದ್ದಳು ರುಕ್ಮಿಣಿ. ಮತ್ತೊಂದೆರಡು ನಿಮಿಷ ಅವರ ಮಧ್ಯೆ ಮೌನ ಕವಿಯಿತು. ಇಬ್ಬರಿಗೂ ಭೇದಿಸುವ ಮನಸ್ಸಿಲ್ಲ, ಎದ್ದು ಹೊರ ನಡೆಯುವ ದಾರಿ ಮರೆತವರಂತೆ ಮುಖಾಮುಖಿಯಾಗಿಯೇ ಕುಳಿತರು.

‘ವಿರಾಜ್ ಮತ್ತೆ ನಾನು ಪ್ರೀತಿಸಿ ಮದುವೆ ಆದವರು. ನಾವೆಷ್ಟು ಅನ್ಯೋನ್ಯವಾಗಿದ್ದೆವೆಂದು ಮೂರನೆಯವರಿಗೆ ಬಿಡಿಸಿ ಹೇಳಿದರೆ ಅರ್ಥವಾಗುವಂಥದ್ದಲ್ಲ. ನಾವಿಬ್ಬರೂ ಬೇರೆ ಬೇರೆ ಎಂದು ನನಗೆ ಯಾವತ್ತೂ ಎನ್ನಿಸಿದ್ದೇ ಇಲ್ಲ, ಹೊರ ಪ್ರಪಂಚದ ಅಗತ್ಯ ನಮ್ಮಿಬ್ಬರನ್ನು ಬಾಧಿಸಿದ್ದಿಲ್ಲ... ಪ್ರತಿಯೊಬ್ಬರ ಜೀವನದಲ್ಲಿ ಅಗತ್ಯವಾದದ್ದೆಲ್ಲಾ ಸಿಕ್ಕಿಬಿಟ್ಟರೆ ನಮ್ಮ ಅಹವಾಲಿಗೆ ಬೆಲೆ ಬರುವುದು ಯಾವಾಗ! ವಿರಾಜ್ ಎಷ್ಟೇ ಪ್ರಯತ್ನಿಸಿದರೂ ನಮ್ಮ ನಡುವೆ ಗಂಡ ಹೆಂಡತಿಯ ಸಂಬಂಧ ಬೆಳೆಸಲು ಅವನಿಂದ ಸಾಧ್ಯವಾಗಲೇ ಇಲ್ಲ. ನಾಟಿ, ಆಯುರ್ವೇದ, ಅಲೋಪತಿ ನಮಗೆ ತಿಳಿದ ಮದ್ದನ್ನೆಲ್ಲಾ ಪ್ರಯತ್ನಿಸಿಯಾಗಿತ್ತು. ಫಲಿತಾಂಶ ಮಾತ್ರ ಸೊನ್ನೆ. ಅವನ ನೋವು ನನಗರ್ಥವಾಗುತ್ತಿತ್ತು. ಆದರೆ ಅವನಿಗೆ ನಾನು ಅರ್ಥವಾಗಲೇ ಇಲ್ಲ. ಅವನಿಂದ ನಾನು ದೈಹಿಕ ಪ್ರೀತಿ ಸಿಕ್ಕರೆ ಬೇಡವೆನ್ನುತ್ತಿರಲಿಲ್ಲ. ಆದರದು ಸಿಗದು ಎಂದಾಗ ನನಗದು ಬೇಕಿರಲೇ ಇಲ್ಲ. ನನ್ನಿಂದ ನಿನಗೆ ಮಕ್ಕಳಾಗದು ಎಂದು ಕೊರಗಿದ, ದತ್ತು ತೆಗೆದುಕೊಳ್ಳುವಾ ಎಂದೆ. ಮಿಲನ ಸುಖ ನಿನಗಿಲ್ಲ ಎಂದ, ಎಂದೋ ಮನಸ್ಸುಗಳ ಮಿಲನವಾಗಿ ಹೋಗಿದೆ ಎಂದೆ. ಬಿಟ್ಟುಬಿಡು ತನ್ನನ್ನು ಎಂದ, ಉಸಿರಿರುವವರೆಗೂ ನಾನು ನಿನ್ನವಳೇ ಎಂದೆ. ಅವನು ನಕ್ಕಿದ್ದ... ಮದುವೆಯ ವಾರ್ಷಿಕೋತ್ಸವಕ್ಕೊಂದು ಸರ್‌ಪ್ರೈಸ್ ಕೊಡುತ್ತೇನೆಂದು ಹೇಳಿ ನನ್ನನ್ನು ಕೆಣಕಿದ, ಕೆರಳಿಸಿದ. ‘ನನ್ನುಸಿರು ಇರುವವರೆಗೂ ನಾನು ನಿನ್ನವಳೇ’ ಎಂದು ನಾನು ಹೇಳಿದ್ದನ್ನು, ತನ್ನುಸಿರಿರುವವರೆಗೆ ಎಂದು ಅರ್ಥೈಸಿಕೊಂಡವರಂತೆ ಒಳ್ಳೆಯ ಸಂಗಾತಿ ಸಿಗಲಿ ಎಂದು ಹಾರೈಸಿದ ಪತ್ರದೊಂದಿಗೆ ಬದುಕಿಗೇ ವಿದಾಯ ಹೇಳಿದ್ದ...’ ಮುಚ್ಚಟೆಯಿಂದ ಕಾಯ್ದಿರಿಸಿಕೊಂಡ ಗುಟ್ಟನ್ನು ಪೂರ್ಣಿಮಾ ಹೀಗೆ ಇಷ್ಟು ವರ್ಷಗಳ ನಂತರ ಬಿಡಿಸಿಡಬಹುದೆಂದು ರುಕ್ಮಿಣಿ ಯೋಚಿಸಿಯೇ ಇರಲಿಲ್ಲ.

ಯಾರ್ಯಾರೋ ಆದರೆ ಹೋಗಲಿ ಎನ್ನೋಣ, ಮನೆ ಮಂದಿಯಾಗಿ ನಾವೇ ಪೂರ್ಣಿಮಕ್ಕನ ಕಷ್ಟದ ಸಮಯದಲ್ಲಿ ಆಗಿ ಬರಲಿಲ್ಲವಲ್ಲ ಎಂದು ನೊಂದುಕೊಳ್ಳುತ್ತ ರುಕ್ಮಿಣಿ, ‘ಅಯ್ಯೋ! ನಾವೆಲ್ಲಾ ಬೇರೇನೋ ತಿಳಿದಿದ್ದೆವು. ನಿನಗೂ ಮತ್ತು ಕಾರ್ತಿಕನಿಗೂ ಸಂಬಂಧವಿದ್ದಿದ್ದು ತಿಳಿದು ವಿರಾಜ... ಇದನ್ನೆಲ್ಲಾ ಯಾಕೆ ಮೊದಲೇ ಹೇಳಲಿಲ್ಲಾ? ಯಾಕೆ ಮೌನವಾಗಿದ್ದೆ? ವಿರಾಜನ ದಿನಕಾರ್ಯ ಮುಗಿಯುತ್ತಲೇ ನೀನೂ ಮನೆಬಿಟ್ಟೆ. ಕಾರ್ತಿಕನೂ ಇರದಿದ್ದುದನ್ನು ನೋಡಿ ನಾವು ನಂಬಿದ್ದನ್ನೇ ಸತ್ಯ ಅಂತ ತಿಳಿಯುವ ಹಾಗಾಯಿತು. ಸತ್ಯವನ್ನು ಮೊದಲೇ ಹೇಳಿ ನಿನ್ನ ಪರಿಶುದ್ಧತೆಯನ್ನು ಸಾಬೀತುಪಡಿಸಿ ಆಡಿಕೊಳ್ಳುವವರ ಬಾಯಿ ಮುಚ್ಚಿಸಬಹುದಿತ್ತಲ್ಲ ಅಕ್ಕಾ!’

‘ನಾನು ಪರಿಶುದ್ಧಳೇ, ಆಗಲೂ ಈಗಲೂ! ಅಷ್ಟಕ್ಕೂ ಎಲ್ಲರ ಕಣ್ಣಲ್ಲಿ ಪರಿಶುದ್ಧಳಾಗಿ ಪ್ರಯೋಜನವೇನಿತ್ತು. ಈಗ ಛೀ... ಥೂ ಎನ್ನುತ್ತಿದ್ದವರು ಅಯ್ಯೋ ಪಾಪ ಎನ್ನುತ್ತಿದ್ದರು ಅಷ್ಟೇ! ಆಡಿಕೊಳ್ಳುವ ಜನರನ್ನು ನಂಬಿಸುವ ಗೊಡವೆಗೆ ಹೋಗಿ ನನ್ನ ವಿರಾಜನನ್ನು, ನಮ್ಮ ಸಂಸಾರದ

